ಪೀಠಿಕೆ ಹಾಕಲಾರಂಭಿಸಿದ. ಅಪ್ಪನ ಮಾತಿಗೆ, 'ಯಪ್ಪ ಊರುಗಾದ್ರು ಹೋಗು ಕಾಡಿಗಾದ್ರು ಹೋಗು ನನ್ ನಿದ್ದೆ ಕೆಡಿಸಿ ನನ್ಯಾಕ್ ಗೋಳುಯ್ಯುಕಂತೀಯಾ?' ಎಂದು ಅಮ್ಮ ಗದರಿದ ಸದ್ದಿಗೆ ಕಣ್ಣು ಮುಚ್ಚಿದ್ದಾಗ, ಕತ್ತಲು ಬೆಚ್ಚಿಬಿದ್ದು ತತ್ತರಗುಟ್ಟಿತು.

'ನಿನಗೆ ಗ್ಯಾನ ಎಂಗೈತೆ. ಊರಿಂದ ಬಂದು ನೆಟ್ಟಗೆ ಎರಡ್ ದಿನ ಆಗಿಲ್ಲವಲ್ಲ? ಊರು ಊರು ಅಂತ ಯಾಕಪ್ಪ ಅರೇ ವಯಸ್ಕಂತೀಯಾ? ಊರಾಗ್ಯಾವ ಗಟ್ಟಿಬಂಗಾರ ಊಣಿಸಿ ಬಂದಿದ್ದೀಯಾ?' ಅಮ್ಮ ಮುಲಾಜಿನಾಚೆ ವದರುತ್ತ ಗುರುಗುಟ್ಟೀಳು. 'ಲೇ ಏನಾರ ಊಣುಸಾಕೋಗ್‌ತ್ತಾರೇನೆ? ತಲೆ ನೆಟ್ಟಗಿಕ್ಕಂಡು ಮಾತಾಡು. ಜಾತ್ರೆ ಸಾಗೈತ್ ಕಣೆ ಮನೆದೇವರ ಜಾತ್ರೆ...' ಎಂದು ಅಪ್ಪ ಎಲ್ಲಿ ಇಲ್ಲದ ಮುತುವರ್ಜಿಲಿ ಮೈಯ್ಯಿ ಮನಸ್ಸನ್ನ ಹಿಗ್ಗಲಿಸಿಕೊಂಡು ಹೇಳ್ ಬುಟ್ಟ.

'ಹೋಗಿವಂತೆ ಸುಮ್ಮನ್ ಬಿದ್ದಕಳಪ್ಪ ಎಲ್ಲೋ ಇರೋ ಜಾತ್ರೆಗೆ ಈಗ್‌ಲೆ ಮೆರವಣಿಗೆ ಏನ್ ಮಾಡುಬೇಡ. ಮಲಗಿರೋರ ನಿದ್ದೇನೆಲ್ಲ ಯಾಕಾಳ್ ಮಾಡ್‌ತ್ತೀಯಾ? ಅಮ್ಮ ಸಿಡಗ್ಗನೆ ಸಿಡುಕಿದಳು.

ಇವತ್ತು ಅಪ್ಪ ಅಷ್ಟು ಸಲೀಸಾಗಿ ನಿದ್ದೆ ಮಾಡುವವನಲ್ಲ. ಯಾಕೆಂದರೆ ಅಪ್ಪನುಟ್ಟಿರುವ ಊರಲ್ಲಿ ವರುಷಕ್ಕೊಂದು ದೊಡ್ಡ ಜಾತ್ರೆ ನಡೆಯುತ್ತದೆ. ಅದು ಜಾತ್ರೆಯೆಂದರೆ ಅದೇನು ಸಣ್ಣ ಜಾತ್ರೆಯಲ್ಲ. ಆ ನೆಲದ ಆ ಕುಲದ ರಂಗು ರಂಗಿನ ಜನರ ನಡುವೆ ಸ್ವಾಮಿ ನಮ್ಮಪ್ಪ ಸಿದ್ದೇಶ್ವರನ ಜಾತ್ರೆ, ಅವನ ಸೇವೆಗೆಂದು ಹರಕೆ ಪೂಜೆಗೆಂದು ಹಣ್ಣುಕಾಯಿಗೆಂದು ಸುತ್ತಲ ಊರೂರಿನ ಭಕ್ತರೆಲ್ಲ ಸೇರುವ ಸತ್ಯವಾದ ಮತ್ತು ನೇಮನಿಷ್ಠೆಯ ಸ್ವಾಮಿ ಸಿದ್ದೇಶ್ವರನ ಜಾತ್ರೆ ಐತೆಂದು ಒದ್ದಾಡುತ್ತಿರುವ ಊರಿನಲ್ಲಿ, ಭಯ-ಭಕುತಿಯಿರುವ ಭಕ್ತರು ಆ ದೇವರಿಗೆ ನಡೆದುಕೊಂಬುವ ಸಾವಿರಾರು ಮನೆಯ ಅಣ್ಣತಮ್ಮಂದಿರುಗಳೆಲ್ಲ ಜಾತ್ರೆಗೆ ಇನ್ನು ತಿಂಗಳಿದ್ದಂಗೆ ಊರಿನ ಜನ ನೆಟ್ಟಗೆ ಯಾರೂ ನಿದ್ದೆ ಮಾಡಲ್ಲ. ಅವರವರ ಮನೆ ಮಠ ತೊಳೆದು ಬಳಿದುಕೊಳ್ಳುತ್ತಾರೆ. ಆರತಿ, ಹಣ್ಣು-ಕಾಯಿಗೆ, ಹೋಳಿಗೆ ತುಪ್ಪಕ್ಕೆ, ದಿನಸಿಗಳನ್ನ ಹೊಂಚಿಕೊಳ್ಳುವ ಈ ಸಮೇವಿನಲ್ಲಿ ಹುಟ್ಟು ಬಿಚ್ಚುವ ಹೊಸ ಬಟ್ಟೆಬರೆಗಳಿಗೆ ಜವಳಿ ಅಂಗಡಿ ಟೈಲರ್ ಅಂಗಡಿಗಳಿಗೆ ಡಿಮ್ಯಾಂಡುಗಳನ್ನ ಒಡ್ಡುತ್ತಾರೆ. ನೆಂಟ್ರು ಪಂಟ್ರುಗಳನ್ನ ಕಡ್ಡಾಯವಾಗಿ ಕರೆದೇ ತೀರುತ್ತಾರೆ. ಯಾಕೆಂದರೆ ಇದು ಅವರವರ ಮನೆಯಾರಕ್ಕೆ ಮಾಡುವ ಸಣ್ಣ ಜಾತ್ರೆಯಲ್ಲ. ಅದು ದೊಡ್ಡ ಜಾತ್ರೆ ಅಂತ. ವಿಜೃಂಭಣೆಯ ಜಾತ್ರೆಗಾಗಿ ಎಲ್ಲಿ ಇಲ್ಲದ ಮುತುವರ್ಜಿಲಿ ಒದ್ದಾಡುವ ಜನರೆಂಬ ಜನಗಳ ನಡುಮಧ್ಯೆ, ನಮಗೆ ಜನ್ಮ ನೀಡಿದ ಈ ಅಪ್ಪನೆಂಬೋನು ಅವನುಟ್ಟಿದ ಊರಲ್ಲಿ ಇಂತ ಜಾತ್ರೆ ಹಬ್ಬ ಹರಿದಿನಗಳು ತಯಾರಾದವೆಂದರೆ ಸಾವಿರಾರು ಗಂಟೆ ಹೊಡೆದಷ್ಟು ಸಂಭ್ರಮವನ್ನ ಕುಂತಾಗ ನಿಂತಾಗ ಅವನೆದೆಯಾಗೆ ಪೇರಿಸಿಕೊಂಬುತ್ತಿರುತ್ತಾನೆ. ಹುಟ್ಟಿದೂರೆಂದರೆ ದೇವರು ದಿಂಡಿರೆಂದರೆ, ಊರಿನ ಹಬ್ಬ ಹರಿದಿನಗಳೆಂದರೆ, ಅವನ ಬಂಧು ಬಳಗವೆಂದರೆ ಅಣ್ಣತಮ್ಮತನದವರೆಂದರೆ ಏನೋ ನಿಧಿ ಸಿಕ್ಕಂತಾಡುತ್ತಿರುತ್ತಾನೆ. ಇವತ್ತಿಗೂ ಎಪ್ಪತ್ತು ವರುಷ ದಾಟಿದ್ದರೂ ಇನ್ನು ಬದುಕು ಬಾಳೆಂಬ ಅಕಾರಾಸ್ತೆಯ ಕಕ್ಕುಲಾತಿಯನ್ನು ಎದೆಯ ಉಸಿರಿಗೆ ಹಸಿರಸಿರಾಗಿ ಪೇರಿಸಿಕೊಂಡಿರುವ ಅಪ್ಪ, ಇನ್ನು ಇಪ್ಪತ್ತರ ವಯಸ್ಸಿನಲ್ಲಿ ಇನ್ನೆಂಗಿರಬೇಡ? ಎಂದು ಅನುಮಾನ ಪಟ್ಟರೆ ಅವನ ಪ್ರಾಯದಲ್ಲಿ ಊರುಬಿಟ್ಟು ಬೆಂಗಳೂರು ಸೇರಿದ್ದೊಂದು ಸೋಜಿಗದ ಸಂಗತಿಯಾಯಿತಂತೆ. ಅಂತೊದ್ದೊಂದು ಕಥೆಯನ್ನು ಅಪ್ಪನ ಅಪ್ಪ ನಮ್ಮ ತಾತ ಆಗಾಗ ಕಥೆ ಹೇಳಿ ಹೇಳಿ ಮೀಸೆ ಮರೆಯಲ್ಲಿ ನಗಾಡುತ್ತಿದ್ದ.

ಪ್ರಾಯದ ಕುಡಿಮೀಸೆಯೊಡೆದು ಬಿಸಿ ರಕ್ತ ಹರಿದಾಡುತ್ತ ಹರೆಯದ ಕನಸುಗಳ ಕೂಡಿಟ್ಟುಕೊಂಡಿದ್ದು ಪಿಯುಸಿ ಪಾಸುಮಾಡಿಕೊಂಡ ಅಪ್ಪ, ಕುಂತುಕಡೆ ಕುಂತವನಲ್ಲ ನಿಂತಕಡೆ ನಿಂತವನಲ್ಲ ಹೊಲಗದ್ದೆ, ಊರುಕೇರಿ ಅಲೆದು ಅಲೆದು ಒಳ್ಳೆ ಫಕೀರನಥರ ಇದ್ದವನು, ಸುಮ್ಮಸುಮ್ಮನೆ ಕಂಡಕಂಡ ಹುಡುಗರನ್ನೆಲ್ಲ ಅಸಾಧ್ಯವಾದ ತೀಟೆ ಮಾಡಿಕೊಂಡು ಅಲೆದಾಡುತ್ತಿದ್ದವನ ಅವಸ್ಥೆ ನೋಡಲಾರದೆ ಮುಂದಿನ ಓದಿಗಾಗಿ ಡಿಗ್ರಿ ಓದಬೇಕಾದ ಕಾಲೇಜಿಗೆಂದು ಕೋಲಾರದಲ್ಲಿ ಸೇರ್ಸತ್ತೀವಿ ಎಂದು ಮನೇಲಿ ತಾತ, ಅಪ್ಪನ ದೊಡ್ಡಪ್ಪಂದಿರು ಕೇಳಿದಾಗ, ನಾನು ಸುತಾರಾಂ ಕಾಲೇಜಿಗೆ ಹೋಗಲ್ಲವೆಂದು ಹಠ ಹಿಡಿದು ಅವರ ಅಮ್ಮನ ಅಂದರೆ ಅಜ್ಜಿಯ ಸೆರಗಿನಿಂದೇ ಬಚ್ಚಿಟ್ಟುಕೊಂಡು ರಂಪ ಮಾಡಿದನಂತೆ. 'ಹುಡುಗ ಎಲ್ಲೊ ಕಾಣದೆ ಕಣ್ಮರೆಗೋಗಿ ಓದೋದು ಬ್ಯಾಡ, ಕೆರಿಯೋದು ಬ್ಯಾಡ ಬಿಡಪ್ಪ. ಇಲ್ಲೇ ಊರಲ್ಲಿ